ಸಿಸಿ ನಂಃ 4102/2023

ಸಿ.ಡಬ್ಲೂ 3/

ಪಿ.ಡಬ್ಲೂ2

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**

**ಧಾರವಾಡ.**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಮೈಲಾರಿ |
| ತಂದೆಯ ಹೆಸರು | ಃ | ಕರಿಯಪ್ಪ ಕುರಬರ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ಗ್ರಾಮ ಪಂಚಾಯಿತಿ ಸದಸ್ಯ |
| ವಾಸ ಸ್ಥಳ | ಃ | ನಾಯಕನಹುಲಿಕಟ್ಟಿ |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **04.08.2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಈಗ ಮೂರು ವರುಷದ ಹಿಂದೆ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ರೇಷನ ಅಕ್ಕಿ ಸಾಗಾಟಣೆ ಮಾಡುತ್ತಿದ್ದಾರೆ ಬನ್ನಿ ಎಂದು ಕರೆದಿರುತ್ತಾರೆ. ನಂತರ ಪೋಲಿಸರು ನಮ್ಮನ್ನು ಯರಿಕೊಪ್ಪ ಬೈಪಾಸ ಹತ್ತಿರ ಕರೆದಿರುತ್ತಾರೆ. ಆ ದಿನ ಅಲ್ಲಿ ಪೋಲಿಸರು ಮಾತ್ರ ಇರುತ್ತಾರೆ. ಹಾಗೂ ಒಂದು ಆಟೋ ಪಂಚಾಯಿತಿ ಕಡೆಗೆ ಬರುತಿತದ್ದರಿಂದ ನಮಗೆ ತಿಳಿಸಿದ್ದರಿಂದ ನಾವು ಪಂಚಾಯಿತಿ ಕಡೆಗೆ ಹೊಗಿ ನಿಂತಿದ್ದೆವು. ಆಗ ಪೋಲಿಸರು ಸದರಿ ಆಟೋವನ್ನು ತಡೆದು ನಿಲ್ಲಿಸಿ ಪರಿಶೀಲನೆ ಮಾಡಿದಾಗ ಅದರಲ್ಲಿ ಒಟ್ಟು 50 ಕೆಜಿಯ 5 ಅಕ್ಕಿ ಚೀಲಗಳು ಇದ್ದವು. ಅವುಗಳನ್ನು ಪೋಲಿಸರು ತಲಾ ಒಂದು ಚೀಲದಲ್ಲಿ 2 ಕಜಿ ಅಕ್ಕಿ ತೆಗೆದಿರು. ಸದರಿ ಅಕ್ಕಿ ರೇಷನ

ಸಿಸಿ ನಂಃ 4102/2023
ಸಿ.ಡಬ್ಲೂ 3/
ಪಿ.ಡಬ್ಲೂ2

ಅಕ್ಕಿಯಾಗಿದ್ದವು. ಆಟೋ ನಂಬರ ಗೊತ್ತಿಲ್ಲ. ಸದರಿ ಆಟೋ ಚಾಲಕನ ಹೆಸರು ಮೆಹಬೂಬ ಗುಂಡಕಲ್ ಎಂದು ಇತ್ತು. ನಂತರ ಆರೋಪಿಯನ್ನು ವಿಚಾರಿಸಿದಾಗ ಆತ ರೈತರಿಂದ ಅಕ್ಕಿಯನ್ನು ತೆಗೆದುಕೊಂಡು ಅವುಗಳನ್ನು ಹುಬ್ಬಳ್ಳಿಯ ಒಂದು ಗೂಡಾನಿಗೆ ಒಯ್ಯುತ್ತಿದ್ದೆನೆ ಎಂದು ಹೇಳಿರುತ್ತಾರೆ. ನಂತರ ಪೋಲಿಸರು ನಮ್ಮ ಸಹಿ ಪಡೆದಿರುತ್ತಾರೆ. ಸಾಕ್ಷಿ ನಿಪಿ.1 ರಲ್ಲಿರುವ ಸಹಿ ಗುರುತಿಸಿದ್ದು ಅದನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ಸಾಕ್ಷಿ ನೊಡಿ ಗುರುತಿಸಿರುತ್ತಾರೆ.

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ಆರೋಪಿಯನ್ನು ವಿಚಾರಿಸಿದಾಗ ಸದರಿ ಆರೋಪಿ ಆ ಅಕ್ಕಿಗಳನ್ನು ರೈತರಿಂದ ಖರೀದಿ ಮಾಡಿ ಅವುಗಳನ್ನು ಹುಬ್ಬಳ್ಳಿಗೆ 2 ನೇ ಆರೋಪಿ ಗೂಡಾನಿನಲ್ಲಿ ಇಟ್ಟು ನಂತರ ಕಾಳು ಸಂತೆಯಲ್ಲಿ ಮಾರಾಟ ಮಾಡುತ್ತೇನೆ ಎಂದು ಹೇಳಿದ ಎಂದರೆ ಸರಿ. ಆ ಕಾಲಕ್ಕೆ ಆಹಾರ ಅಧಿಕಾರಿಗಳಾದ ಚಾಸಾ1 ರವರು ಸಹ ಅಲ್ಲಿ ಇದ್ದರು ಎಂದರೆ ಸರಿ.

ಸಿಸಿ ನಂಃ 4102/2023
ಸಿ.ಡಬ್ಲೂ 3/
ಪಿ.ಡಬ್ಲೂ2

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

1. ಧಾರವಾಡದಿಂದ ಯರಿಕೊಪ್ಪಕ್ಕೆ ಹೊಗಲು ರಜತಗಿರಿ , ತೇಜಸ್ವಿ ನಗರ, ಎಸ ಡಿ ಎಂ ಕಾಲೇಜ , ನುಗ್ಗಿಕೇರಿ , ಬೈಪಾಸ ದಾಟಿದ ಮೇಲೆ ಯರಿಕೊಪ್ಪ ಗ್ರಾಮ ಎಂದರೆ ಸರಿ. ನುಗ್ಗಿಕೇರಿಯಿಂದ ಕಲಘಟಗಿವರಗೂ ರೈತರು ಭತ್ತ ಬೆಳೆಯುತ್ತಾರೆ ಎಂದರೆ ಸರಿ. ಯರಿಕೊಪ್ಪ ದಾಟಿದ 5 ಕಿ ಮಿ ನಂತರ ನಾಯಕನಹುಲಿಕಟ್ಟಿ ಇದೆ ಎಂದರೆ ಸರಿ. ನಾನು ನಾಯಕನಹುಲಿಕಟ್ಟಿ ವಾಸಿ ಎಂದರೆ ಸರಿ. ಆ ದಿನ ಪೋಲಿಸರು ನನಗೆ ಲಿಖಿತವಾಗಿ ನೊಟಿಸ ನೀಡಿಲ್ಲ ಎಂದರೆ ಸರಿ. ಪಂಚನಾಮೆಯನ್ನು ನಾನು ಹೇಳಿ ಬರೆಸಿಲ್ಲ ಎಂದರೆ ಸರಿ. ನಮ್ಮ ಊರಿನಲ್ಲಿ ಆಗಲಿ ಅಥವಾ ಯರಿಕೊಪ್ಪ ದಲ್ಲಾಗಲೀ ನನ್ನ ನೇತೃತ್ವದಲ್ಲಿ ಬಗೆಹರಿಸುತ್ತೇವೆ ಎಂದರೆ ಸರಿ. ನಾನು 5-6 ಪ್ರಕರಣಗಳಲ್ಲಿ ಪಂಚನಾಗಿ ಸಹಿ ಮಾಡಿದ್ದೆನೆ ಎಂದರೆ ಸರಿ. ಧಾರವಾಡ ಗ್ರಾಮಿಣ ಠಾಣೆ ಯಲ್ಲಿ ನಮ್ಮ ಊರಿನ ಸುತ್ತ ಮುತ್ತ ಗ್ರಾಮದ ಯಾವದೇ ದೂರು ಬಂದರೇ ಪೋಲಿಸರು ನನ್ನನ್ನು ಬೇಟಿಯಾಗುತ್ತಾರೆ ಎಂದರೆ ಸರಿ. ನುಗ್ಗಿಕೇರಿಯಿಂದ ಕಲಘಟಗಿ ಹಾಗೂ ಕಾರವಾರ ಜಲ್ಲೇಯವರ ಹೆಚ್ಚಾಗಿ ಭತ್ತ ಬೆಳೆಯುತ್ತಾರೆ ಎಂದರೆ ಸರಿ. ಧಾರವಾಡದಿಂದ ಹುಬ್ಬಳಿಳಗೆ ಹೊಗಬೆಕಾದರೇ ರಮ್ಯಾ ರೆಸಿಡನ್ಸಿಯಿಂದ ಮುಖ್ಯ ಹೆದ್ದಾರಿ ಮೂಲಕ ಹೊಗಬೆಕು ಎಂದರೆ ಸರಿ. ಹುಬ್ಬಳ್ಳಿಗೆ ಹೊಗಲು ಯರಿಕೊಪ್ಪ ಗ್ರಾಮದ ಮೂಲಕ

ಹೊಗಲು ಆಗುವುದಿಲ್ಲ ಎಂದರೆ ಸರಿ. ನಿಪಿ.1 ಕ್ಕೆ ಪಂಚಾಯಿತಿ ಕಚೇರಿಯಲ್ಲಿ ಸಹಿ ಮಾಡಿದ್ದೆನೆ ಎಂದರೆ ಸರಿ. ನಾನು ಊರ ಪ್ರಮುಖ ಆಗಿರುವ ಕಾರಣ ಪೋಲಿಸರು ಹೇಳಿದ್ದಕ್ಕೆ ಸಹಿ ಮಾಡಿದ್ದೆನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಎಲ್ಲ ಹಿರಿಯರು ಸೇರಿ ಸಹಿ ಮಾಡಿರುತ್ತೇವೆ ಎನ್ನುತ್ತಾರೆ. ನನ್ನ ಸಮಕ್ಷಮ ಯಾವದೇ ರಿಕ್ಷಾ ಹಾಗೂ ಅಕ್ಕಿ ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಯಾವದೇ ರಿಕ್ಷಾ ಇರಲಿಲ್ಲ ಹಾಗೂ ಅದರಲ್ಲಿ 5 ಅಕ್ಕಿ ಚೀಲಗಳು ಇರಲಿಲ್ಲ ಹಾಗೂ ಅಲ್ಲಿ ಯಾದವೇ ಸ್ಯಾಂಪಲ ತೆಗೆದಿಲ್ಲ ಎಂದರೆ ಸರಿಯಲ್ಲ. ಯರಿಕೊಪ್ಪ ಹುಬ್ಬಳ್ಳಿ ರಸ್ತೆ ಮಧ್ಯದಲ್ಲಿ ಸಾಕಷುಟ ರಿಕ್ಷಾ ಓಡಾಡುತ್ತವೆ ಎಂದರೆ ಸರಿ. ರಮ್ಯಾ ರೆಸಿಡೆನ್ಸಿ ಹಾಗು ಸರ್ವಿಸ ರಸ್ತೆ ಹತ್ತಿರ ಸಾಕಷ್ಟು ರಿಕ್ಷಾ ಓಡಾಡುತ್ತವೆ ಎಂದರೆ ಸರಿ. ಆರೋಪಿಯನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೊಡುತ್ತಿದ್ದೆನೆ ಎದಂರೆ ಸಾಕ್ಷಿ ನ್ಯಾಯಾಲಯದಲ್ಲಿ ಇದೇ ಮೊದಲ ಬಾರಿಗೆ ನೊಡುತ್ತಿದ್ದೆನೆ ಎನ್ನುತ್ತಾರೆ. ಈ ದಿನ ಪೋಲಿಸರು ಅಕ್ಕಿ ಪ್ರಕರಣ ಸಾಕ್ಷಿ ಇದೆ ಬಂದು ಹೇಳಿ ಎಂದಿದ್ದಾರೆ ಎಂದರೆ ಸರಿ. ಅವರು ಹೇಳಿ ಕೊಟ್ಟ ಹಾಗೇ ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನ ತಮಕ್ಷಮ ಯಾವದೇ ಮಾಹಿತಿ ನೀಡಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹಾಗೂ ಸರಕಾರ ಅಸಹಾಯ ಅಬಿಯೊಜಕರು ಮಾಡಿದ ಪಾಟೀ ಸವಾಲಿನಲ್ಲಿ ಸೂಚಿಸಿದ ವಿಚಾರ ಸುಳ್ಳುನಿಂದ ಕೂಡಿವೆ ಎಂದರೆ ಸರಿಯಲ್ಲ. ಜಪಿತ ಪಡಿಸಿ ಅಕ್ಕಿ 1 ನೇ ಆರೋಪಿ ಗೆ ಸಂಬಂದ ಇಲ್ಲ ಎಂದರೆ ಸರಿಯಲ್ಲ.

ಸಿಸಿ ನಂಃ 4102/2023
ಸಿ.ಡಬ್ಲೂ 3/
ಪಿ.ಡಬ್ಲೂ2

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.